ಅ) ಗ್ರಾಮೀಣ ಕಾರ್ಯಕ್ರಮಗಳ ಸಂಶೋಧನೆ, ಚುನಾಯಿತ ಸದಸ್ಯರ ಮತ್ತು ಅಧಿಕಾರಿಗಳ ತರಬೇತಿ ಹಾಗೂ ಆಡಳಿತ ಸಂಕೀರ್ಣ ಕಟ್ಟಡವನ್ನು ರೂ.138 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಸರ್ಕಾರ ಆಡಳಿತಾತ್ಮಕ ಮತ್ತು ಆರ್ಥಿಕ ಮಂಜೂರಾತಿ ನೀಡಿದೆ. 1995ರ ಸಾಲಿನಲ್ಲಿ ಈ ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸಿ ಕೊಡಲಾಗಿದ್ದ ಕಂಪನಿಯು ಕಟ್ಟಡವನ್ನು ಪ್ರಾರಂಭಿಸದೇ ಇದ್ದ ಪ್ರಯಕ್ತ ಅವರ ಟೆಂಡರ್‌ನ್ನು ದಿನಾಂಕ : 22-2-97 ರಲ್ಲಿ ರದ್ದು ಪಡಿಸಲಾಗಿದೆ

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಸಾರ್ವಜನಿಕ ಶಿಲ್ಪ ವಲಯದ ಸಂಘಟನೆ

1518 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಸಾರ್ವಜನಿಕ ಶಿಲ್ಪ ವಲಯದ ಸಂಘಟನೆ (ಪಿ.ಹೆಚ್.ಇ.) ಮತ್ತು ಕಾರ್ಯಕ್ರಮಗಳೇನು?

ಆ) ಕಳೆದ ಮೂರು ವರ್ಷಗಳಲ್ಲಿ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು? ಮತ್ತು ಖರ್ಚಾದ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಕಛೇರಿಗಳು ಎಲ್ಲಿವೆ ಯಾರು ಇದರ ಜವಾಬ್ದಾರಿ ನಿರ್ವಹಿಸುತ್ತಿರುವರು?

ಈ) ಈ ಇಲಾಖೆ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಏನೇನು ಕಾರ್ಯಕ್ರಮ ಹಾಕಿಕೊಂಡಿದೆ?

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರತರದ ಕುಡಿಯುವ ನೀರಿನ ತೊಂದರೆ ಇದ್ದು, ಇದನ್ನು ನಿಭಾಯಿಸಲು ಯಾವುದಾದರು ಶಾಶ್ವತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ? ಇದ್ದರೆ, ಯಾವುದು, ಎಲ್ಲಿ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಸಾರ್ವಜನಿಕ ಆರೋಗ್ಯ ತಾಂತ್ರಿಕ ಇಲಾಖೆಯ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯವ ನೀರಿನ ಸೌಕರ್ಯ ಒದಗಿಸುವ ಯೋಜನೆಗಳನ್ನು ವಿವಿಧ ಕಾರ್ಯಕ್ರಮಗಳಡಿ ಅನುಷ್ಠಾನಗೊಳಿಸಲಾಗುತ್ತದೆ. ಜನಸಂಖ್ಯೆ ಆಧಾರದ ಮೇಲೆ ಕೈಪಂಪು ಕೊಳವೆ ಬಾವಿಗಳ/ ಕಿರು ನೀರು ಸರಬರಾಜು ಯೋಜನೆಗಳ ಕೊಳವೆ ನೀರು ಸರಬರಾಜು ಯೋಜನೆಗಳ ಮೂಲಕ ಗ್ರಾಮಗಳಿಗೆ/ಜನವಸತಿಗಳಿಗೆ ನೀರು ಸರಬರಾಜು ಯೋಜನೆ ಮಾಡಲಾಗುತ್ತದೆ. ಇಲಾಖಾ ರಿಗ್ ಯಂತ್ರಗಳ ಮೂಲಕ ಕೊಳವೆ ಬಾವಿ ಕೊರೆಯುವ ಮತ್ತು ಸ್ವಚ್ಛ ಗೊಳಿಸುವ ಕೆಲಸಗಳನ್ನು ಕೈಗೊಳ್ಳಲಾಗುತ್ತದೆ. ಸಾರ್ವಜನಿಕ ಆರೋಗ್ಯ ತಾಂತ್ರಿಕ ಇಲಾಖೆಯ ಸಂಘಟನಾ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ವಿಭಾಗಗಳಿದ್ದು ಇವು ಮಂಗಳೂರು ಮತ್ತು ಉಡುಪಿಯಲ್ಲಿ ಕೆಲಸ ನಿರ್ವಹಿಸುತ್ತಿವೆ ಹಾಗೂ ಸಾರ್ವಜನಿಕ ಆರೋಗ್ಯ ತಾಂತ್ರಿಕ ಇಲಾಖೆಯ ಯಾಂತ್ರಿಕ ಉಪ-ವಿಭಾಗವು ಮಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿದೆ. ವಿಭಾಗ ಕಛೇರಿಗಳ ಜವಾಬ್ದಾರಿಯನ್ನು ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್ ಮತ್ತು ಉಪ-ವಿಭಾಗ ಕಛೇರಿಯ ಜವಾಬ್ದಾರಿಯನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಿರ್ವಹಿಸುತ್ತಾರೆ.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 57 ಕೊಳವೆ ನೀರು ಸರಬರಾಜು ಯೋಜನೆಗಳನ್ನು 50 ಕಿರು ನೀರು ಸರಬರಾಜು ಯೋಜನೆಗಳನ್ನು ಹಾಗೂ 300 ಕೈಪಂಪು ಕೊಳವೆ ಬಾವಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಉ) ನೇತ್ರಾವತಿ ನದಿಯಿಂದ ಉಳ್ಳಾಲ ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಗೆ ನೀರು ಸರಬರಾಜು ಯೋಜನೆಯ ವಿನ್ಯಾಸ : ವಿವರವಾದ ಅಂದಾಜು ಪಟ್ಟಿ ತಯಾರಿಸಲು ಸರ್ವೇ ಕೆಲಸ ಪ್ರಗತಿಯಲ್ಲಿದೆ.

ಅನುಬಂಧ - 1

(ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2133ರ ಲಗತ್ತು)

1. ಪ್ರಧಾನ ಇಂಜಿನಿಯರ್

ಜನಾರೋಗ್ಯ ಶಿಲ್ಪಕಾರ್ಯವಲಯ ಬೆಂಗಳೂರು

ಸೂಪರಿಂಟೆಂಡಿಂಗ್ ಇಂಜಿನಿಯರ್ ಜನಾರೋಗ್ಯ ಶಿಲ್ಪಕಾರ್ಯವೃತ್ತ, ಬೆಂಗಳೂರು - ಕಾರ್ಯಪಾಲಕ ಇಂಜಿನಿಯರ್ ಕೊಳವೆ ಬಾವಿ ಕೊರೆಯುವ ವಿಭಾಗ, ಬೆಂಗಳೂರು - ನಂ.1, ಕೊಳವೆಬಾವಿ ಕೊರೆಯುವ ಉಪವಿಭಾಗ, ಬೆಂಗಳೂರು - ನಂ.3, ಕೊಳವೆ ಬಾವಿ ಕೊರೆಯುವ ಉಪವಿಭಾಗ, ಬೆಂಗಳೂರು - ನಂ.2, ಕೊಳವೆ ಬಾವಿ ಕೊರೆಯುವ ಉಪವಿಭಾಗ, ಚಿತ್ರದುರ್ಗ - ಮೆಕ್ಯಾನಿಕಲ್ ಉಪವಿಭಾಗ, ತುಮಕೂರು- ಪಿ ಅಂಡ್ ಡಿ ಘಟಕ, ಕೋಲಾರ.

ಸೂಪರಿಂಟೆಂಡಿಂಗ್ ಇಂಜಿನಿಯರ್, ಜನಾರೋಗ್ಯ ಶಿಲ್ಪ ಕಾರ್ಯ ವೃತ್ತ, ಮೈಸೂರು-ಕಾರ್ಯಪಾಲಕ ಇಂಜಿನಿಯರ್, ಮೆಕ್ಯಾನಿಕಲ್ ವಿಭಾಗ ಹಾಸನ - ನಂ.4,ಕೊಳವೆ ಬಾವಿ ಕೊರೆಯುವ ಉಪವಿಭಾಗ, ಹಾಸನ - ನಂ 2, ಪಿ ಎಚ್ ಇ ಮೆಕ್ಯಾನಿಕಲ್ ಉಪವಿಭಾಗ, ಮೈಸೂರು-ಮೆಕ್ಯಾನಿಕಲ್ ಉಪವಿಭಾಗ, ಚಿಕ್ಕಮಗಳೂರು - ಮೆಕ್ಯಾನಿಕಲ್ ಉಪವಿಭಾಗ, ಮಡಿಕೇರಿ-ಮೆಕ್ಯಾನಿಕಲ್ ಉಪವಿಭಾಗ, ಮಂಗಳೂರು - ಪಿ ಅಂಡ್ ಡಿ ಘಟಕ, ಮಂಡ್ಯ.

ಸೂಪರಿಂಟೆಂಡಿಂಗ್ ಇಂಜಿನಿಯರ್ ಜನಾರೋಗ್ಯ ಶಿಲ್ಪಕಾರ್ಯ ವೃತ್ತಿ, ಬೆಳಗಾಂ - ಕಾರ್ಯಪಾಲಕ ಇಂಜಿನಿಯರ್, ಮೆಕ್ಯಾನಿಕಲ್ ವಿಭಾಗ, ಧಾರವಾಡ - ಮೆಕ್ಯಾನಿಕಲ್ ಉಪವಿಭಾಗ-ಧಾರವಾಡ - ಮೆಕ್ಯಾನಿಕಲ್ ಉಪವಿಭಾಗ ಬೆಳಗಾಂ-ಮೆಕ್ಯಾನಿಕಲ್ ಉಪವಿಭಾಗ, ಬಾಗಲಕೋಟೆ - ಪಿ.ಅಂಡ್.ಡಿ. ಘಟಕ, ಕಾರವಾರ.

ಸೂಪರಿಂಟೆಂಡಿಂಗ್ ಇಂಜಿನಿಯರ್ ಜನಾರೋಗ್ಯ ಶಿಲ್ಪಕಾರ್ಯ ವೃತ್ತ, ಗುಲ್ಬರ್ಗಾ - ಕಾರ್ಯಾಪಾಲಕ ಇಂಜಿನಿಯರ್, ಮೆಕ್ಯಾನಿಕಲ್ ವಿಭಾಗ ಗುಲ್ಬರ್ಗಾ ಮೆಕ್ಯಾನಿಕಲ್ ಉಪವಿಭಾಗ ಹಾಗೂ ಕಾರ್ಯಾಗಾರ ಗುಲ್ಬರ್ಗಾ- ಮೆಕ್ಯಾನಿಕಲ್ ಉಪವಿಭಾಗ ರಾಯಚೂರು - ಮೆಕ್ಯಾನಿಕಲ್ ಉಪ ವಿಭಾಗ, ಬಳ್ಳಾರಿ - ಪಿ ಅಂಡ್ ಡಿ ಘಟಕ, ಬೀದರ್

2) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು : ಬೆಂಗಳೂರು ವೃತ್ತ

ಬೆಂಗಳೂರು (ಗ್ರಾ) - ರಾಮನಗರ - ಕೋಲಾರ - ಚಿಕ್ಕಬಳ್ಳಾಪುರ - ತುಮಕೂರು - ಮಧುಗಿರಿ - ಚಿತ್ರದುರ್ಗಾ - ದಾವಣಗೆರೆ - ಶಿವಮೊಗ್ಗ - ಸಾಗರ.

ಮೈಸೂರು ವೃತ್ತ :

ಮೈಸೂರು - ಕೆ.ಆರ್. ನಗರ - ಮಂಡ್ಯ - ಮಡಿಕೇರಿ - ಮಂಗಳೂರು - ಉಡುಪಿ - ಹಾಸನ - ಚಿಕ್ಕಬಳ್ಳಾಪುರ - ಸಿ.ಆರ್. ಪಟ್ಟಣ.

ಬೆಳಗಾಂ ವೃತ್ತ :

ಬೆಳಗಾಂ - ಚಿಕ್ಕೋಡಿ - ಧಾರವಾಡ - ಹಾವೇರಿ - ಗದಗ - ಕಾರವಾರ - ಶಿರಸಿ - ಬಿಜಾಪುರ - ಬಾಗಲಕೋಟೆ.

ಗುಲ್ಬರ್ಗಾ ವೃತ್ತ :

ಗುಲ್ಬರ್ಗಾ -ಯಾದಗಿರಿ - ಬೀದರ್ - ರಾಯಚೂರು - ಕೊಪ್ಪಳ - ಬಳ್ಳಾರಿ - ಹರಪನಹಳ್ಳಿ,

3. ವಿಶ್ವ ಬ್ಯಾಂಕ್ ಇಂಜಿನಿಯರಿಂಗ್ ವಿಭಾಗಗಳು :

ಬೆಂಗಳೂರು (ಗ್ರಾ) - ತುಮಕೂರು - ಶಿವಮೊಗ್ಗ - ಮಂಡ್ಯ - ಮೈಸೂರು - ಮಂಗಳೂರು - ಹಾಸನ - ಬೆಳಗಾಂ - ಬೀದರ್ - ಗುಲ್ಬರ್ಗಾ - ರಾಯಚೂರು - ಬಳ್ಳಾರಿ.

4. ನೆದರ್ ಲ್ಯಾಂಡ್ ಇಂಜಿನಿಯರಿಂಗ್ ವಿಭಾಗಗಳು

ಧಾರವಾಡ - ಬಿಜಾಪುರ.

ಅನುಬಂಧ - 2

(ವಿಧಾನ ಸಭೆ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ. 2133ರ ಲಗತ್ತು)

ಗ್ರಾಮೀಣ ನೀರು ಸರಬರಾಜು - ಕೇಂದ್ರ ವಲಯ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	1994-95		1995-96		1996-97	
		ಆಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ	ಆಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ	ಆಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ
1	2	3	4	5	6	7	8
1.	ಬೆಂಗಳೂರು (ಗ್ರಾ)	194.50	165.00	260.50	184.09	316.00	278.77
2.	ಕೋಲಾರ	177.00	245.17	182.50	262.00	207.00	283.37
3.	ತುಮಕೂರು	124.00	147.28	226.00	222.93	331.00	226.77
4.	ಚಿತ್ರದುರ್ಗ	125.40	141.90	199.50	228.19	312.00	268.31
5.	ಶಿವಮೊಗ್ಗ	171.50	169.38	312.00	374.29	361.00	297.80
6.	ಮೈಸೂರು	177.75	197.60	237.00	268.92	360.00	434.28
7.	ಮಂಡ್ಯ	124.00	129.23	181.00	215.30	335.00	257.71
8.	ಹಾಸನ	109.00	116.50	160.50	184.92	301.50	310.32

1	2	3	4	5	6	7	8
9.	ದಕ್ಷಿಣ ಕನ್ನಡ	250.75	279.99	483.50	495.82	630.00	687.29
10.	ಕೊಡಗು	119.00	107.74	180.00	246.40	235.00	260.85
11.	ಚಿಕ್ಕಮಗಳೂರು	137.00	91.14	197.50	173.16	295.00	121.43
12.	ಬೆಳಗಾಂ	252.42	382.65	424.00	385.90	535.00	431.52
13.	ಧಾರವಾಡ	218.50	304.90	340.50	402.21	546.00	430.84
14.	ಉತ್ತರ ಕನ್ನಡ	172.00	171.67	271.00	448.12	318.00	363.27
15.	ಬಿಜಾಪುರ	192.95	302.69	240.00	408.57	351.00	348.83
16.	ಗುಲ್ಬರ್ಗಾ	127.00	205.04	388.00	458.32	556.00	415.50
17.	ಬೀದರ್	79.00	193.81	102.50	132.63	165.00	120.35
18.	ರಾಯಚೂರು	152.00	259.85	255.50	297.32	356.00	508.09
19.	ಬಳ್ಳಾರಿ	144.73	202.01	218.50	231.14	414.00	377.62
20.	ಬೆಂಗಳೂರು (ನ)	199.00	215.55	240.00	230.22	252.00	354.34
	ಒಟ್ಟು	**3248.00**	**4026.29**	**5100.00**	**5790.61**	**7231.50**	**6777.26**

ಅನುಬಂಧ - 2

(ವಿಧಾನ ಸಭೆ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ 2133ರ ಲಗತ್ತು)

ಗ್ರಾಮೀಣ ನೀರು ಸರಬರಾಜು - ರಾಜ್ಯ ವಲಯ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	1994-95		1995-96		1996-97	
		ಅಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ	ಅಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ	ಅಯವ್ಯಯದಲ್ಲಿ ಒದಗಿಸಿದ ಹಣ	ವೆಚ್ಚ
1	2	3	4	5	6	7	8
1.	ಬೆಂಗಳೂರು (ಗ್ರಾ)	199.06	321.32	203.01	471.84	301.80	468.13
2.	ಕೋಲಾರ	178.52	288.68	207.45	285.09	371.47	444.46
3.	ತುಮಕೂರು	225.30	297.70	229.06	446.25	315.84	589.84
4.	ಚಿತ್ರದುರ್ಗ	202.70	273.21	201.65	550.62	289.65	476.03
5.	ಶಿವಮೊಗ್ಗ	243.97	231.13	248.50	427.95	340.65	393.91
6.	ಮೈಸೂರು	374.54	542.67	436.40	706.63	583.14	691.24
7.	ಮಂಡ್ಯ	187.70	280.67	203.41	339.58	292..30	373.69
8.	ಹಾಸನ	143.43	197.89	137.90	260.57	220.44	382.99

1	2	3	4	5	6	7	8
9.	ದಕ್ಷಿಣ ಕನ್ನಡ	292.09	496.36	343.27	461..92	477.55	563.05
10.	ಕೊಡಗು	97.20	162.64	90.72	185.64	132.38	268.14
11.	ಚಿಕ್ಕಮಗಳೂರು	139.50	164.67	152.90	294.13	283.71	263.80
12.	ಬೆಳಗಾಂ	424.71	432.72	416.98	610.87	556.27	727.49
13.	ಧಾರವಾಡ	202.11	357.74	225.00	465.55	425.71	412.12
14.	ಉತ್ತರ ಕನ್ನಡ	181.80	326.70	178.24	250.41	230.66	265.11
15.	ಬಿಜಾಪುರ	190.94	358.17	216.74	397.86	354.95	365.81
16)	ಗುಲ್ಬರ್ಗಾ	205.15	291.62	220.50	258.21	346.34	321.63
17)	ಬೀದರ್	168.60	241.21	152.44	294.08	276.65	286.25
18)	ರಾಯಚೂರು	241.90	258.21	241.90	334.92	317.18	340.37
19)	ಬಳ್ಳಾರಿ	116.68	310.31	115.50	183.36	215.40	325.28
20)	ಬೆಂಗಳೂರು (ನ)	168.70	288.68	145.20	274.07	240.58	319.54
	ಒಟ್ಟು	**4184.60**	**6032.30**	**4366.77**	**7799.55**	**6572.67**	**8278.88**